# ಸಲ್ಮಾನನ ಹೊಸ 'ಕತ್ರೀನಾ'!



ವೀರ್ ಚಿತ್ರದಲ್ಲಿ ಜರೈನ್ ಖಾನ್



ಕತ್ರೀನಾ ಕೈಫ್



ಸ್ನೇಹಾ ಉಲ್ಲಾಳ್

ಸಲ್ಲೂ ಭಾಯ್ ಹೊಸ ಕತ್ರೀನಾಳನ್ನು ಹುಡುಕಿಕೊಂಡಿದ್ದಾನೆ! ಬಾಲಿವುಡ್ ತುಂಬ ಇದೇ ಸುದ್ದಿ!

ಕತ್ರೀನಾ ಕೈಫ್ ಮತ್ತು ಸಲ್ಮಾನ್ ಖಾನ್ ಜಿಗ್ರೀ ದೋಸ್ತ್‌ಗಳಾಗಿದ್ದವರು. ಗುಟ್ಟಾಗಿ ಮದುವೆಯೂ ಆಗಿದ್ದಾರೆ ಎಂದೂ ಗುಲ್ಲು ಹಬ್ಬಿತ್ತು. ಅಂತಿರ್ಪ ದೋಸ್ತಿಗಳ ನಡುವೆ ಈಗ ಜಿಗ್ರೀ ವೈರತ್ವ ಬೆಳೆದಿದೆ. ಇಬ್ಬರೂ ಮುಖ ಕೊಟ್ಟು ಮಾತನಾಡುತ್ತಿಲ್ಲ. ಹಿಂದಿನಂತೆ ಜತೆಯಾಗಿ ಕಾಣಿಸಿಕೊಳ್ಳುತ್ತಿಲ್ಲ.

ಸಲ್ಮಾನ್ ಖಾನ್‌ನ ಹೊಸ ಚಿತ್ರ 'ವೀರ್' ಬಿಡುಗಡೆಗೆ ಸಿದ್ಧವಾಗುತ್ತಿದೆ. ಅದರ ಹೀರೋಯಿನ್ ಜರೈನ್ ಖಾನ್. ಆಕೆ ನೋಡಲು ಸ್ವಲ್ಪ ಕತ್ರೀನಾ ಕೈಫ್ ತರಹವೇ ಕಾಣುತ್ತಿದ್ದಾಳೆ. ತರಹ ಏನು, ಕತ್ರೀನಾಗಿಂತ ಹೆಚ್ಚು ಮುದ್ದಾಗಿಯೇ ಕಾಣಿಸುತ್ತಿದ್ದಾಳೆ.

ಸಲ್ಮಾನ್‌ನ ಜಾತಕ ತಡಕಾಡಿದರೆ ಆತನಿಗೆ ಇದೇನೂ ಹೊಸ ವಿದ್ಯಮಾನ ಅಲ್ಲ. ಜತೆಯಾಗಿ, ಕ್ಲೋಸ್ ಆಗಿದ್ದ ಹೀರೋಯಿನ್‌ಗಳು ಕೈಕೊಟ್ಟರೆ ಇನ್ನೊಬ್ಬಳನ್ನು ಹೇಗೆ ತಯಾರು ಮಾಡಬೇಕೆಂದು ಸಲ್ಲೂ ಭಾಯ್‌ಗೆ ಚೆನ್ನಾಗಿ ಗೊತ್ತಿದೆ.

ಈ ಹಿಂದೆ ಐಶ್ವರ್ಯ ರೈ ಜತೆ ಸಲ್ಲೂ ಹೀಗೆಯೇ ಓಡಾಡುತ್ತಿದ್ದ. ಇಬ್ಬರೂ ಇನ್ನೇನು ಮದುವೆಯೇ ಆಗಿ ಬಿಡುತ್ತಾರೆ ಎನ್ನುವ ಸುದ್ದಿಯೂ ಹಬ್ಬಿತ್ತು. ಆ ಸುದ್ದಿಯ ಬೆನ್ನಲ್ಲೆ ಇಬ್ಬರೂ ಮದುವೆ ಆಗುವುದನ್ನು ವಿರೋಧಿಸುವುದಾಗಿ ಶಿವಸೇನೆಯವರು ಬಹಿರಂಗವಾಗಿಯೇ ಗುಟುರು ಹಾಕಿದ್ದರು.

ಅವರಿಬ್ಬರ ನಡುವಿನ ಸ್ನೇಹವೂ ಹಳಸಿ, ಐಶ್ವರ್ಯ ಅಭಿಷೇಕ್‌ನನ್ನು ಮದುವೆಯಾಗಿ ಸುಖ ಸಂಸಾರ ನಡೆಸುತ್ತಿದ್ದಾಳೆ.

ಆ ಬಳಿಕ ಸಲ್ಲೂ ಐಶ್ವರ್ಯ ರೈಯನ್ನೇ ಹೋಲುವ ಸುಂದರಿಯೊಬ್ಬಳನ್ನು ತನ್ನ ಹೊಸ ಸಿನಿಮಾಗೆ ಹಾಕಿಕೊಂಡಿದ್ದ. ಆಕೆಯ ಹೆಸರು ಸ್ನೇಹಾ ಉಲ್ಲಾಳ್. ಐಶ್ವರ್ಯಳಂತೆಯೇ ಆಕೆಯೂ ಕನ್ನಡ ಕರಾವಳಿಯ ಬೆಡಗಿ. ಚಿತ್ರ ಬಿಡುಗಡೆಯೂ ಆಗಿ ಹಿಟ್ ಆಯಿತು. ಸಲ್ಲೂ ಸೇಡು ತೀರಿಸಿಕೊಂಡಿದ್ದ. ಅದರಲ್ಲೂ 'ಲುಟ್ ಗಯೇ.. ' ಎಂಬ ವಿರಹ ವೇದನೆಯ ಹಾಡೊಂದು ಸೂಪರ್‌ಹಿಟ್ ಆಗಿತ್ತು. ಆ ಹಾಡು ಐಶ್ ಬೇಬಿಯ ಬಗ್ಗೆಯೇ ಬರೆದದ್ದು ಎಂದು ಸಲ್ಲೂ ಗುಲ್ಲೆಬ್ಬಿಸಿದ್ದೂ ಆಯಿತು.

ಈಗ ಕತ್ರೀನಾ ಕೈಫ್ ಸರದಿ. ವೀರ್ ಸಿನಿಮಾ ಹಿಟ್ ಆದರೆ ಸಲ್ಲೂ ಖ್ಯಾತಿ ಇನ್ನಷ್ಟು ಹೆಚ್ಚಾಗುತ್ತದೆ. ಆದರೆ ಜರೈನ್ ಖಾನ್‌ಗೆ ಏನಾದರೂ ಲಾಭ ಆಗಬಹುದೆ? ಅಥವಾ ಈಗ ಮೂಲೆಗುಂಪಾಗಿರುವ ಸ್ನೇಹಾ ಉಲ್ಲಾಳ್‌ಳಂತೆ ಆಕೆಯೂ ಮೂಲೆ ಸೇರಬಹುದೆ? ಬಾಲಿವುಡ್ ಪಂಡಿತರು 'ವೀರ್' ಚಿತ್ರ ಅದ್ಭುತವಾಗಿ ಬಂದಿದೆ ಎಂದು ಈಗಾಗಲೆ ಗಾಳಿಸುದ್ದಿ ಹಬ್ಬಿಸುತ್ತಿದ್ದಾರೆ. ಮುಂದೇನಾಗುತ್ತೋ ನೋಡಬೇಕು.



# ಪ್ರಿಯಾಂಕಾಗೆ ಏಳು ಗಂಡಂದಿರು!

ಒಂದೇ ಚಿತ್ರದಲ್ಲಿ 12 ಪಾತ್ರಗಳಲ್ಲಿ ನಟಿಸಿ ಆಯಿತು. ಇದೀಗ ಹೊಸ ವರ್ಷದ ಹೊಸ ಚಿತ್ರದಲ್ಲಿ ಪ್ರಿಯಾಂಕಾ ಚೋಪ್ರಾಗೆ 7 ಗಂಡಂದಿರಂತೆ! ವಿಶಾಲ್ ಭಾರದ್ವಾಜ್ ನಿರ್ಮಾಣದ ಹೊಸ ಚಿತ್ರಕ್ಕೆ ಇನ್ನೂ ಹೆಸರಿಟ್ಟಿಲ್ಲ.

2009 ಪ್ರಿಯಾಂಕಾಗೆ ಖುಷಿ ತಂದಿದೆ. ಅತ್ಯುತ್ತಮ ನಟಿ ಪ್ರಶಸ್ತಿ ಸಿಕ್ಕಿದೆ. ಜತೆಗೆ ಬಿಡುಗಡೆಯಾದ ಚಿತ್ರಗಳು ತೋಪಾದರೂ ಪ್ರಚಾರ ಕಡಿಮೆಯಾಗಿಲ್ಲ. ರಣಬೀರ್ ಕಪೂರ್ ಜತೆಗೆ ಅಂಜಾನಾ ಅಂಜಾನಿ ಸಿನಿಮಾದ ಶೂಟಿಂಗ್ ಕೂಡಾ ಭಾರಿ ಸುದ್ದಿ ಮಾಡುತ್ತಿದೆ. ಈ ಮಧ್ಯೆ ವಿಶಾಲ್ ಚಿತ್ರದಲ್ಲಿ ಏಳು ಹೀರೋಗಳಿಗೆ ಹೀರೋಯಿನ್ ಬೇರೆ! ಯಶಸ್ಸಿಗೆ ಇನ್ನೇನು ಬೇಕು?

■ ಬಿಂದು